ಶ್ರೀಃ

ಶ್ರೀಮತೇ ರಾಮಾನುಜಾಯ ನಮಃ

# ತಿರುಪ್ಪಾವೈ ವಿಮರ್ಶನ

**(ಶ್ರೀ ಉಭ. ವೇ. ತಿರುವಾಯ್ಮೊೞಿ ವಿ.ಟಿ. ತಿರುನಾರಾಯಣಯ್ಯಂಗಾರ್ ಸ್ವಾಮಿ, ಎಂ.ಎ.)**

ಪರಾಂಕುಶ ಕಲಿಧ್ವಂಸೌ ಶೇಷಸಂಭವ ಯೋಗಿನೌ ।

ಕೇಶವಾರ್ಯಯುತಂಚಾದಿವಣ್ ಶಠಾರಿ ಮುನಿಂ ಭಜೆ ॥

ಶ್ರೀ ವಿಲ್ಲಿಪುತ್ತೂರ್ ನಗರದಲ್ಲಿ ವಿಷ್ಣುಚಿತ್ತರಿಗೆ ತುಲಸೀಕಾನನದಲ್ಲಿ ಲಭಿಸಿದ ಕನ್ಯೆಯ ಹೆಸರು ಗೋದಾ ಅಥವಾ ಆಣ್ಡಾಳ್ ಎಂದು ಪ್ರಸಿದ್ಧವಾಗಿದೆ. ಅವಳ ಕೃತಿಗಳು ಎರಡು. ಅವುಗಳಲ್ಲಿ ಮೂವತ್ತು ಪದ್ಯಗಳ ಗ್ರಂಥಕ್ಕೆ 'ತಿರುಪ್ಪಾವೈ' ಎಂದು ಹೆಸರು. ಛಾನ್ದಸವೆಂದು ಪ್ರಸಿದ್ಧಿ ಪಡೆದ ವೈದಿಕ ವಾಗ್ಭಂಡಾರದಲ್ಲಿ ವೇದ ಲಕ್ಷಣ ಸಮುಪೇತವಾದ ದ್ರಾವಿಡ ಭಾಷೆಯಲ್ಲಿ ಈ ಗ್ರಂಥವು ಹೊರಪಟ್ಟಿದೆ.  ಉಭಯ ವೇದಾನ್ತಗಳಲ್ಲಿ ತೋರಿಬಂದಿರುವ ತತ್ತ್ವ, ಹಿತ ಮತ್ತು ಪುರುಷಾರ್ಥಗಳನ್ನು ಈ ಪ್ರಬಂಧದಲ್ಲಿ ಸಾರಿದೆ. ಆದುದರಿಂದ ಪರಮ ವೈದಿಕ ಸಿದ್ಧಾನ್ತ ಸಾರವೆಂದು ಶಿಷ್ಟರು ಇದನ್ನು ನಿರಂತರವಾಗಿ ಅನುಸಂಧಾನ ಮಾಡುವ ಸಂಪ್ರದಾಯವೇರ್ಪಟ್ಟಿದೆ. ಶ್ರೀ ರಾಮಾನುಜಾಚಾರ್ಯರಿಗೆ ಅನೇಕ ರೀತಿಯಲ್ಲಿ ಪ್ರಾಶಸ್ತ್ಯವೇರ್ಪಟ್ಟಿದ್ದರೂ ಅವರಿಗೆ ಅಭಿಮತತಮವಾದದ್ದು 'ತಿರುಪ್ಪಾವೈ ಜೀಯರ್' ಎಂಬ ನಿರ್ದೇಶ. ' ಕೋದೈ ತಮಿೞ್ ಐಯ್ಯೆಂದುಂಮೈಂದುಂ ಅರಿಯಾದ ಮಾನಿಡರೈ ವೈಯಂ ಶುಮಪ್ಪದುಂ ವಂಬು' ಎಂದು ಸಾರುವಂತಹ ಮಹಿಮೆಯನ್ನು ದ್ರಾವಿಡದಲ್ಲಿ ಅಡಗಿರುವ ಈ ಶ್ರುತಿಭಾಗವು ಪಡೆದಿರುತ್ತದೆ. 'ಪಾವೈ' ಎಂದರೆ ಭಾವವೆಂದರ್ಥ. ಜೀವನದಲ್ಲಿ ತೋರುವ ಬಯಕೆಯನ್ನು ಪೂರ್ಣಗೊಳಿಸುವ ಸಂಕಲ್ಪ ವ್ರತ. 'ತಿರು' ಎಂದರೆ ಶ್ರೇಷ್ಠವೆಂದರ್ಥ. ಉತ್ತಮವಾದ ಬಯಕೆಯೆಂದೂ ಅದನ್ನು ಸಾಧಿಸಿಕೊಡುವ ಉತ್ತಮ ವ್ರತಾನುಷ್ಠಾನವೆಂದೂ 'ತಿರುಪ್ಪಾವೈ' ಎಂಬ ಪದಕ್ಕೆ ಅರ್ಥವಾಗುತ್ತದೆ. 'ತಿರು' ಎಂಬ ಪದಕ್ಕೆ 'ಶ್ರೀದೇವಿ' ಎಂದೂ ಅರ್ಥವಾಗುತ್ತದೆ. ಎಲ್ಲ ವಿಧದಲ್ಲೂ ಎಲ್ಲ ನೆಲೆಗಳಲ್ಲೂ ಅವಿಚ್ಛಿನ್ನವಾಗಿ ಅಳವಳಿದ ಆನಂದವನ್ನು ಸಾಧಿಸಿಕೊಡುವ ಉಪಕರಣ ಶ್ರೀತತ್ತ್ವ. ಆ ಶ್ರೀದೇವಿಯೇ ತನ್ನ ಬಯಕೆಯನ್ನು ಸಾಧಿಸಿಕೊಳ್ಳುವುದಕ್ಕೆ ಕೈಗೊಂಡ ವ್ರತವಾದುದರಿಂದ ಎಲ್ಲರಿಗೂ ಇಷ್ಟಾರ್ಥ ಸಿದ್ಧಿಗೆ ತಿರುಪ್ಪಾವೈ ಅತ್ಯಾದರಣೀಯವಾಗುತ್ತದೆ.

ಮನಸ್ಸಿನಲ್ಲಿ ಅಂಕುರಿಸಿದ ಆಸೆಯನ್ನು ಈಡೇರಿಸಿಕೊಳ್ಳುವುದಕ್ಕಾಗಿ ವ್ರತವನ್ನು ಆಚರಿಸಬೇಕು. ಆದರೆ ಬಯಕೆಯ ಸ್ವರೂಪವನ್ನು ವಿಮರ್ಶೆ ಮಾಡಿರುವ ಶಾಸ್ತ್ರಗಳು ಅಲ್ಪಾಸ್ಥಿರ ಫಲಗಳನ್ನೂ ಜೀವನ ಸ್ವರೂಪಕ್ಕೆ ತಕ್ಕದಲ್ಲದುದೂ ಆದ ಆಸೆಗಳನ್ನೂ  ಪುರಸ್ಕರಿಸದೆ ಅವುಗಳನ್ನು ಸಾಧಿಸಿಕೊಡಬಲ್ಲ ಕರ್ಮಗಳನ್ನು 'ಕಾಮ್ಯ'ವೆಂದು ನಿರ್ದೇಶಮಾಡಿ ಕಾಮ್ಯವ್ರತಗಳನ್ನು ಬಹಿಷ್ಕರಿಸಿವೆ. ಆದರೂ ಶಾಸ್ತ್ರಾಭಿಜ್ಞರಾದವರು ಅಂತಹ ವ್ರತಗಳನ್ನು ಆಚರಿಸಿದ್ದರೆ ಅದನ್ನು ಶಿಷ್ಟಾಚಾರವೆಂದು ಬಗೆದು ಕಾಮ್ಯವಾದರೂ ನಡೆಸಿಕೊಂಡು ಬರುವುದು ಸನಾತನ ಸತ್ಸಂಪ್ರದಾಯವಾಗಿದೆ.

ತಿರುಪ್ಪಾವೈ ವ್ರತವನ್ನು ಆಚರಿಸಿದ ಗೋದೆಗೆ ಪಿನಾಕಿವಾಲ್ಲಭ್ಯವನ್ನು ಸಾಧಿಸಿಕೊಳ್ಳಲು ಕಾತ್ಯಾಯಿನಿಯು ಆಚರಿಸಿದ ವ್ರತವೇ ಆದರ್ಶವಾಗಿದ್ದಿರಬೇಕು. ಈ ರೀತಿಯ ಶಿಷ್ಟಾಚಾರಕ್ಕೆ ಮನ್ನಣೆ ಕೊಡುವುದು ವೇದ ಸಂಮತವೆಂದು ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಕಂಡುಬರುವ ಹೋಳಾಧಿಕರಣದಲ್ಲಿ ಗೋಚರವಾಗುತ್ತದೆ.

ಶ್ರೀದೇವಿಯೇ ಭೂಮಿಜೆಯಾಗಿ ಜನ್ಮತಾಳಿ ವ್ರತವನ್ನು ಆಚರಿಸಿದಳೆಂದು ಪ್ರತೀತಿ. ಒಂದು ಸಮಾಜಕ್ಕೆ ಸೇರಿಕೊಂಡು ಅಲ್ಲಿ ಬಾಳುವ ಜನ ಮತ್ತು ಅವರ ರೀತಿಗಳನ್ನು ಅನುಸರಿಸುವ ಮೂಲಕ ವೇದಶಾಸ್ತ್ರ ಸಿದ್ಧವಾದ ಅನುಷ್ಠಾನ ಕ್ರಮವನ್ನು ಗೋದಾದೇವಿಯು ಪ್ರಕಾಶ ಪಡಿಸಿದ್ದಾಳೆ. ಜನ್ಮದಲ್ಲಿ ಸೀತೆಯಂತೆ ಅಯೋನಿಜೆ. ಮನೆತನದಲ್ಲಿ ದ್ವಿಜೋತ್ತಮರೂ ಭಗವತ್ಸೇವಾನಿರತರೂ ಆದ ವಿಷ್ಣುಚಿತ್ತರ ತನಯೆ. ಮನಸ್ಸಿಗೆ ಒಪ್ಪುವ ಪತಿಯೋ ಪಾರ್ವತಿಗೆ ಈಶ್ವರನಂತೆ ಸರ್ವೇಶ್ವರನಾದ ಶ್ರೀ ವಿಲ್ಲಿಪುತ್ತೂರಿನಲ್ಲಿ ನಮ್ಮ ಕಣ್ಣಿಗೆ ಅರ್ಚಾರೂಪದಲ್ಲಿ ತೋರುವ ಶ್ರೀ ಕೃಷ್ಣ 'ವಡಂಪೆರುಂ ಕೋಯಿಲುಡೈಯಾನ್'. ಲೆಕ್ಕವಿಲ್ಲದಷ್ಟು ಕನ್ಯೆಯರು ಕೃಷ್ಣನನ್ನು ಪ್ರೀತಿಸಿದರೂ ಗೋದಾದೇವಿ ಅವನನ್ನೇ ಆಶಿಸುತ್ತಾಳೆ. 'ನದೀನಾಂ ಸಾಗರೋ ಗತಿಃ'. ಅವಳ ಪ್ರಣಯದ ಸ್ವರೂಪ ವಿಲಕ್ಷಣವಾದದ್ದು 'ಮಾನಿಡವರ್ಕೆನ್ನು ಪೇಚ್ಚುಪಡಿಲ್ ವಾೞ್ಗಿಲ್ಲೇನ್ ಕಂಡಾಯ್ ಮನ್ಮಥನೇ' ಎನ್ನುತ್ತಾಳೆ.

ಮನುಷ್ಯನಿಗೆ ತನ್ನ ಭಾವನೆಗೆ ಅನುಗುಣವಾಗಿ ಸಮಾಜವು ತೋರುತ್ತದೆ. ಕೃಷ್ಣಪ್ರೇಮದ ಒತ್ತಡವು ಗೋದಾದೇವಿಯನ್ನು ಗೋಪಕನ್ಯೆಯಾಗಿಯೂ ಶ್ರೀ ವಿಲ್ಲಿಪುತ್ತೂರನ್ನು ಗೋಕುಲವನ್ನಾಗಿಯೂ ಅಲ್ಲಿ ವಾಸಮಾಡುವ ಪ್ರಜೆಗಳನ್ನು ಗೋಪರನ್ನಾಗಿಯೂ ಅಲ್ಲಿ ದರ್ಶನ ಕೊಡುತ್ತಿರುವ ದೇವರನ್ನು ನಂದಕಿಶೋರನನ್ನಾಗಿಯೂ ಪರಿವರ್ತನೆ ಮಾಡಿತು.

ಕೃಷ್ಣನಲ್ಲಿ ಅನುರಾಗ ಪಡೆದಿದ್ದ ಗೋಪಕನ್ಯೆಯರ ವಿಚಾರವಾಗಿ ಅನುರಾಗದ ಪರಿಶುದ್ಧವೂ ಪವಿತ್ರವೂ ಅಪ್ರಾಕೃತವೂ ಆದ ವೈಲಕ್ಷಣ್ಯವನ್ನರಿಯದ ಪ್ರಾಕೃತ ಗೋಪವೃದ್ಧರು ಧರ್ಮಪಾಲನೆಯ ದೃಷ್ಟಿಯಿಂದ ಯಾವ ವಿಧದಲ್ಲೂ ಕೃಷ್ಣನ ಗೋಚರಕ್ಕೆ ಸಿಕ್ಕದಂತೆ ಎಲ್ಲ ಗೋಪಕನ್ಯೆಯರನ್ನೂ ನೆಲವರೆಗಳಲ್ಲಿ ಕೂಡಿಹಾಕಿದ್ದರು. ಕೃಷ್ಣನು ದೈವವೆಂದು ಅವರು ಅರಿತಿರಲಿಲ್ಲ. ಅತಿ ಪ್ರಭಾವಶಾಲಿಯಾದ ಕಿಶೋರ ಎಂದು ಮಾತ್ರ ಅರಿತಿದ್ದರು. ಆದರೂ ಪರಮಧರ್ಮವಾದ ಭಗವಂತನ ವಿಷಯವಾದ ಅಪ್ರಾಕೃತ ಅನುರಾಗಕ್ಕೆ ಉಂಟಾದ ತಡೆ ಲೋಕಕ್ಕೆ ಕ್ಷೇಮ ತರುವುದಿಲ್ಲ. ಅಂತಯೇ ಮಳೆಯಿಲ್ಲದೆ ಬೆಳೆಯಿಲ್ಲದೆ ಗೋಪರ ಅಮೂಲ್ಯ ಧನವಾದ ಗೋವುಗಳಿಗೆ ಆಹಾರವು ಸಿಕ್ಕದಂತೆ ಎಲ್ಲೆಡೆಯಲ್ಲೂ ಕ್ಷಾಮ ತೋರಿ ಸರ್ವನಾಶವಾಗುವ ಭೀಕರ ಸ್ಥಿತಿಯೇರ್ಪಟ್ಟಿತು. ಕೃಷ್ಣನಲ್ಲಿ ಅನುರಕ್ತರಾಗಿದ್ದ ನೆಲವರೆಗಳಲ್ಲಿದ್ದ ಗೋಪಕನ್ಯೆಯರಿಗೆ ಈ ಕಷ್ಟದ ಭಾವನೆ ಅಂಟಿಕೊಳ್ಳಲಿಲ್ಲ.

ಗೋವುಗಳ ಕ್ಷೇಮಕ್ಕೆ ಹಾಗೆಯೇ ಸರ್ವವಿಧವಾದ ಸಮೃದ್ಧಿಗೆ ಸಾಧಕವಾಗುವಂತೆ 'ವ್ರತವನ್ನು' ಕೈಗೊಳ್ಳುವಂತೆ ತಮ್ಮ ಪದ್ಧತಿಯಂತೆ ಗೋಪವೃದ್ಧರು ತಮ್ಮ ಕನ್ಯೆಯರಿಗೆ ಅಣತಿಯಿತ್ತರು. ಪುರುಷ ಸಹಾಯವಿಲ್ಲದೆ ವ್ರತವು ನಿಷ್ಪ್ರತ್ಯೂಹವಾಗಿ ನಡೆಯಲಾರದೆಂದು ಬಗೆದು ಸರ್ವಸಮರ್ಥನಾದ ಕೃಷ್ಣನನ್ನು ಗೋಪವೃದ್ಧರು ನಿರ್ಬಂಧ ಪಡಿಸುತ್ತಾರೆ. ಆ ವೇಳೆಗೆ ಸಂಜೆಯಾದ್ದರಿಂದ ತನ್ನ ತಂದೆಯಾದ ನಂದಗೋಪನ ಮಂದಿರದಲ್ಲಿ ಪ್ರಾತಃಕಾಲ ವ್ರತಾಚರಣೆಗೆ ಬಂದು ಕಾಣಬಹುದೆಂದು ಅನುಮತಿ ನೀಡಿ ಕೃಷ್ಣನು ಸ್ವಭವನಕ್ಕೆ ತೆರಳಿದನು. ಗೋಪಕನ್ಯೆಯರೂ ತಮ್ಮ ತಮ್ಮ ಮನೆಗಳಿಗೆ ಆ ರಾತ್ರಿಯನ್ನು ಕಳೆಯುವುದಕ್ಕೆ ಹೋದರು.

ಈ ವ್ರತದಲ್ಲಿ ಎರಡು ಭಾವನೆಗಳಿವೆ. ಮೊದಲನೆಯದು ಸುಭಿಕ್ಷವನ್ನುಂಟುಮಾಡುವ ಗೋಪವೃದ್ಧರ ಕಾಮಾನುಗುಣವಾಗಿ ಮಾಡುವ ವ್ರತ. ಅದು ಪ್ರಾದೇಶಿಕ-ಪ್ರಾಸಂಗಿಕ. ಎರಡನೆಯದು ಸರ್ವಜೀವಾತ್ಮರಿಗೂ ಸಂಬಂಧಪಟ್ಟದ್ದು. ಪರಮಾತ್ಮನ ಸಾಯುಜ್ಯದಿಂದ ನಿತ್ಯನಿರತಿಶಯವಾದ ಆನಂದವನ್ನು ಅನುಭವಿಸುವುದು. ಈ ಎರಡನೆಯ ಭಾವನೆಯನ್ನು ಸಾಧಿಸುವ ಬಗೆ ತಿರುಪ್ಪಾವೈಯಲ್ಲಿ ತೋರಿಬರುತ್ತದೆ. ಈ ಮಾತು ವೇದಾನ್ತದ ಪರಮಾರ್ಥವನ್ನು ಸ್ಪಷ್ಟಪಡಿಸುತ್ತದೆ.

ನಮ್ಮ ಮನಸ್ಸಿನಲ್ಲಿ ಒಂದು ಕಾಮನೆಯು ಉಂಟಾದರೆ ಅದನ್ನು ಸಫಲಗೊಳಿಸಲು ಮಾಡಬೇಕಾದ ವ್ರತಕ್ಕೆ ಶುಭವಾದ ಮುಹೂರ್ತ, ಅನುಮೋದಿಸಿ ಸಹಾಯ ನೀಡುವ ಸಭ್ಯರು ಮತ್ತು ಅವಶ್ಯಕವಾದ ಉಪಕರಣಗಳು ಇವುಗಳೆಲ್ಲಾ ಕೂಡುವ ವೇಳೆಗೆ ನಮಗೆ ಬೇಸರ ನಿರಾಸೆಗಳೂ ತೋರಬಹುದು. ಹಾಗಲ್ಲದೆ ನಮಗೆ ಆಸೆ ತೋರಿದ ಕ್ಷಣವೇ ಉತ್ತಮ

ಮುಹೂರ್ತವಾಗಿ ಪರಿಣಮಿಸಿರುವುದೆ ಈಶ್ವರ ಸಂಕಲ್ಪ. ಅವನಿಗೆ ನಮ್ಮಲ್ಲಿರುವ ದಯೆ, ನಮ್ಮ ದುಃಖವನ್ನು ಕಂಡು ತಾನೂ ಮರುಗುವ ಭಾವವಿಪಾಕ. ಇದು ಯಾದೃಚ್ಛಿಕ ಸುಕೃತ ವಿಶೇಷ. ನಿರ್ಹೇತುಕ ಸಹೇತುಕವಾದ ಮುಕುನ್ದ ಕರುಣೆ "ನಾಹಂ ಪುರುಷಕಾರೇಣ ನಚಾಪ್ಯನ್ಯೇನ ಹೇತುನಾ । ಕೇವಲಂ ಸ್ವೇಚ್ಛಯೈವಾಹಂ ಪ್ರೇಕ್ಷೆ ಕಂಚಿತ್ ಕದಾಚನ ॥ " ಎಂಬುದಾಗಿ ಸರ್ವ ಸ್ವತಂತ್ರನಾದ ಪರಮೇಶ್ವರನ ನುಡಿ.

ಕೃಷ್ಣನನ್ನು ಸಂದರ್ಶಿಸುವ ಉದ್ಯಮದಲ್ಲಿ ತೊಡಗಿದ ಗೋಪಕನ್ಯೆ ಗೋದೆ ಸ್ವಸಂಪಾದಿತವಾದ ಯಾವ ಉಪಕರಣವನ್ನೂ ಬಳಸಿಲ್ಲ. ಅವಳ ಪ್ರಯತ್ನವೆಲ್ಲಾ ತನ್ನ ಒಡನಾಡಿಗಳೊಡನೆ ಒಂದೇ ಧ್ಯೇಯದಿಂದ ಕೃಷ್ಣನ ಸನ್ನಿಧಿಗೆ ತೆರಳಿ ಅಸ್ಥಾನೇ ಭಯಶಂಕಿಗಳಾದ ನಂದಗೋಪ ಯಶೋದೆ ಮುಂತಾದವರಲ್ಲಿ ತಮ್ಮ ಸದ್ಭಾವನೆಯನ್ನೂ ಕೃಷ್ಣನು ನೀಡಿದ್ದ ಆಜ್ಞೆಯನ್ನೂ ಪ್ರಕಾಶ ಪಡಿಸುತ್ತಾಳೆ. 'ನಾರಾಯಣನೇ ಪರೈ ತರುವಾನ್', 'ಪಾರ್ಕಡಲುಳ್ ಪೈಯತ್ತುಯಿನ್ನ ಪರಮನಡಿಪಾಡಿ', 'ಉಲಹಳಂದ ಉತ್ತಮನ್ ಪೇರ್ ಪಾಡಿ', 'ಊಳಿಮುದಲ್ವನ್ ಉರುವಂ ಪೋಲ್', 'ದಾಮೋದರನ್ನೈ' ಎಂದು ಈಶ್ವರನ ಐದು ಅವಸ್ಥೆಗಳನ್ನು ಸಂಕೀರ್ತನ ಮಾಡಿರುತ್ತಾಳೆ. 'ನೆಯ್ ಉಣ್ಣೋಂ ಪಾಲ್ ಉಣ್ಣೋಂ', 'ಐಯಮುಂ ಪಿಚ್ಚೈಯುಂ ಕೈಕಾಟ್ಟಿ', ಎಂದು ಭೋಗದಲ್ಲಿ ಅನಾಸಕ್ತಿಯನ್ನೂ ಕರ್ತವ್ಯದಲ್ಲಿ ಶ್ರದ್ಧೆಯನ್ನೂ ತೋರಿಸಿದ್ದಾಳೆ. ತನ್ನಂತಹ ಇತರ ಹತ್ತು ಜನರನ್ನೂ ತನ್ನೊಡನೆ ಕೃಷ್ಣನ ಸನ್ನಿಧಿಗೆ ಕರೆದೊಯ್ಯುತ್ತಾಳೆ ಗೋದಾದೇವಿ. ಹತ್ತು ಜನರೂ ಹತ್ತು ವಿಧವಾದ ಜ್ಞಾನಾವಸ್ಥೆಯನ್ನು ಪ್ರತಿಬಿಂಬಿಸುತ್ತಾರೆ.

ಕೃಷ್ಣನು ನೀಳಾದೇವಿಯೊಡನೆ (ಅವಳಿಗೆ ನಪ್ಪಿನ್ನೈಪ್ಪಿರಾಟ್ಟಿ ಅಂದರೆ ನಮ್ಮ ಹಿಂದಿನ ನಾಯಿಕೆ ಎಂದು ತಮಿಳಿನಲ್ಲಿ ಹೆಸರು) ಭೋಗಾಸಕ್ತನಾಗಿ ನಿದ್ರಿಸುತ್ತಿರುವಾಗ ಗೋದೆಯು ನೀಳಾದೇವಿಯನ್ನು ಪ್ರಾರ್ಥಿಸಿ ತಮ್ಮನ್ನೂ ಸಹ ಅವಳೊಡನೆ ಸೇರಿಸಿಕೊಂಡು ಕೃಷ್ಣ ಭೋಗರಸವನ್ನು ತಮಗೂ ಕರುಣಿಸುವಂತೆ ಪುರುಷಕಾರವನ್ನು ಮಾಡುವಂತೆ ಪ್ರಾರ್ಥಿಸುತ್ತಾಳೆ. ಯೋಗನಿದ್ರೆಯಲ್ಲಿರುವ ಕೃಷ್ಣನನ್ನು ತಾವಿದ್ದ ಕಡೆಗೆ ಬಂದು ತಮಗೆ ಬೇಕಾದ ಉಪಕರಣದಾನಾದಿಗಳನ್ನು ಮಾಡಬೇಕೆಂದು ಕೋರುತ್ತಾಳೆ. ಅವನು ಅಂತೆಯೇ ತಮ್ಮಲ್ಲಿಗೆ ಬಂದಾಗ 'ಕಾಪು' ಕಟ್ಟುತ್ತಾರೆ. ಅವನಲ್ಲಿ ಇರುವ ಪಾಂಚಜನ್ಯ ಮುಂತಾದ ಉಪಕರಣಗಳಂತೆಯೇ ಇರುವ ಉಪಕರಣಗಳನ್ನು ತಮಗೆ ಅವನೇ ಕರುಣಿಸಬೇಕೆಂದು ಪರಮ ಸಾಮ್ಯ ವೇಷವನ್ನು ಈಶ್ವರ ದತ್ತವಾಗಿ ಪ್ರಾರ್ಥಿಸುತ್ತಾಳೆ. ಅನಂತರ ಅವನು ನೀಡುವ ಸಕಲ ವಿಧವಾದ ಭೂಷಣಗಳನ್ನೂ ವಸ್ತ್ರಗಳನ್ನು ಧರಿಸಿ ಹವಿಸ್ಸನ್ನೂ ಅವನೊಂದಿಗೆ ಮತ್ತು ತನ್ನಂತಿರುವ ಇತರರೊಂದಿಗೆ ಕುಳಿತು ಭುಜಿಸಲು ಸಿದ್ಧತೆಯನ್ನು ವ್ಯಕ್ತಪಡಿಸುತ್ತಾಳೆ. ಇದಾದ ಮೇಲೆ ಈಶ್ವರನ ನಿಕಟ ಸಂಬಂಧ ಕಳೆದುಕೊಳ್ಳುವುದಕ್ಕಾಗುವುದಿಲ್ಲವೆಂದೂ ಅವಜ್ಞತೆಯಲ್ಲಿ ತಾವು ಮಾಡುವ ಅಪಚಾರಗಳನ್ನು ಕಂಡು ಕೋಪಗೊಳ್ಳಬಾರದೆಂದು ಮೊರೆಯಿಡುತ್ತಾಳೆ.

Commented [VS1]:

ಕೊನೆಯದಾಗಿ ಈಶ್ವರನು ಕರುಣಿಸಿರುವ ಉಪಕರಣಗಳನ್ನು ತೆಗೆದುಕೊಂಡು ಅವನನ್ನು ಅಗಲುವುದಕ್ಕೆ ಗೋದಾದೇವಿ ಸಿದ್ಧಳಲ್ಲ. ಎಲ್ಲಾ ಕಾಲದಲ್ಲೂ ಗೋವಿಂದನೊಡನೆ ಬಂಧವು ಉಳಿದುಕೊಂಡಿರುತ್ತದೆ. ಸಕಲ ಸೇವೆಗಳನ್ನೂ ಅವನಿಗೇ ಸಲ್ಲಿಸುತ್ತಾಳೆ. ಆ ಸೇವಾಜನಿತವಾದ ಆನಂದಕ್ಕೆ ಅವಳು ಭಾಗಿಯಾಗುವುದಿಲ್ಲ. ಆ ಸೇವೆಯ ಆನಂದವೂ ಭಗವಂತನದೇ ಆಗಿರತಕ್ಕದ್ದು. ಅವನ ಆನಂದದಿಂದ ಹರಿದು ಬಂದ ಆನಂದಕ್ಕೆ ಸೇವಾಸಕ್ತನಾದ ಕಿಂಕರನು ಭಾಗಿಯಾಗುತ್ತಾನೆ.

ತಿರುಪ್ಪಾವೈಯಲ್ಲಿ ಸಾರಾಂಶವಾಗಿ ಇಷ್ಟು ತೋರಿಬರುತ್ತದೆ. ನಾರಾಯಣನೇ ದೈವ. ಜೀವಾತ್ಮರ ದುಃಖವನ್ನು ಕಂಡು ತನ್ನ ಮನಸ್ಸು ದುಃಖಪಡುವುದು ದಯೆಯ ಲಕ್ಷಣ. ಸ್ವಾರ್ಥಕ್ಕೆ ಅಲ್ಲದ ಪರಿಪೂರ್ಣನ ಇತರ ದುಃಖ ದರ್ಶನದಿಂದ ಉಂಟಾಗುವ ಮನೋವ್ಯಥೆ ಜಗದುದ್ಧಾರಕ್ಕೆ ಮೂಲ. ಈ ದಯೆಯಿಂದ ಸಂಸ್ಕಾರ ಪಡೆದ ಚೇತನನಿಗೆ ಜೀವೇಶ್ವರ ಸಂಬಂಧ ತೋರಿ ಭಕ್ತರ ಹಿಂಬದಿಯಲ್ಲಿದ್ದುಕೊಂಡು ಸ್ವಾರ್ಥರಹಿತವಾದ ಈಶ್ವರ ಸೇವೆಯಲ್ಲಿ ನಿರತವಾಗಿರುವುದು ಪರಮಗುರಿ ಪರಮ ಪುರುಷಾರ್ಥ.

ಇದೇ ಶೇಷಭೂತನ ಸಾಮ್ರಾಜ್ಯ - ಕೈಂಕರ್ಯ ಸಾಮ್ರಾಜ್ಯ. ಈ ತತ್ವ ರಹಸ್ಯವನ್ನು ಲೋಕದ ಕ್ಷೇಮಕ್ಕೂ ಬಳಸಬಹುದು. ನಾವು ನಿಜವಾಗಿಯೂ ಅಂತಃಶುದ್ಧಿಯಿಂದ ನಮ್ಮ ಸತ್ಪುರುಷತ್ವವನ್ನು ಸಾಕ್ಷಾತ್ಕಾರ ಮಾಡಬೇಕಾದರೆ ಸ್ವಾರ್ಥ ಎಂಬ ಅಂಶವನ್ನು ಪೂರ್ಣವಾಗಿ ನಾಶಗೊಳಿಸಿ ನೆರೆಯ ದುಃಖವನ್ನು ಕಂಡು ಮನದಲ್ಲಿ ಮರುಕತೋರಿ ಆ ದುಃಖ ನಿವಾರಣೆಗೆ ಪ್ರವರ್ತಿಸುವುದು ಸೇವೆಯ ಪ್ರಥಮ ಸೋಪಾನ. ನಮ್ಮ ಸೇವೆಯಿಂದ ಪ್ರಜೆಗಳಿಗೆ ಆನಂದವಾದರೆ ಆ ಆನಂದದಿಂದ ನಾವು ತೃಪ್ತರಾಗಬೇಕಾದದ್ದು ಕೊನೆಯ ಮೆಟ್ಟಿಲು. ಇದು ತಿರುಪ್ಪಾವೈಯಲ್ಲಿ ಕಂಡು ಬರುವ ಆದೇಶ.

“ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ ।

ಉತ್ಸವೇಷುಚ ಸರ್ವೇಷು ಪಿತೇವ ಪರಿತುಷ್ಯತಿ ॥”.

ವಿ.ಟಿ. ತಿರುನಾರಾಯಣಯ್ಯಂಗಾರ್

ಮೈಸೂರು

ಈ ಪ್ರಬಂಧವು ‘ಬೆಂಗಳೂರು ತಿರುಪ್ಪಾವೈ ಕಮಿಟಿ’ 1967ನೆಯ ಇಸವಿಯಲ್ಲಿ ಪ್ರಕಟಿಸಿರುವ ‘ತಿರುಪ್ಪಾವೈ ಸಾವನಿರ್’ ನಲ್ಲಿ ಪ್ರಥಮವಾಗಿ ಪ್ರಕಟಗೊಂಡಿದೆ.